ದಿನಾಂಕ 19-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ. ಕೆ ಪಿ. ವಕೀಲರವರಿಂದಃ**

ನಾನು ಅರ್ಜಿದಾರರ ಪರ ಸಾಕ್ಷಿದಾರನಾಗಿರುತ್ತೇನೆ. ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟ್ ಮತ್ತು ಎರಡು ಕ್ಷ ಕಿರಣದ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 25 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜಿ. ಎಂ. ಯು ವಕೀಲರಿಂದಃ**

ಮೂಲ ಅರ್ಜಿದಾರರಾದ ಗುಡ್ಡೆ ಉಸ್ಮಾನ್‌ರವರು ನಿಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಯನ್ನು ಪಡೆದು ಹೋದ ನಂತರ ಮತ್ತೆ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆಯೇ ಎಂದರೆ ಇಲ್ಲ. ಗುಡ್ಡೆ ಉಸ್ಮಾನ್ ರವರು ನಿಮ್ಮ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗುವ ಸಮಯದಲ್ಲಿ ಅವರಿಗೆ ರಕ್ತದೊತ್ತಡದ ಕಾಯಿಲೆ ಮತ್ತು ಸಕ್ಕರೆ ಕಾಯಿಲೆ ಇತ್ತೇ ಅದಕ್ಕೆ ಅವರು ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದರೇ ಎಂದರೆ ಹೌದು. ನಿಮ್ಮ ಆಸ್ಪತ್ರೆಯಿಂದ ಗುಡ್ಡೆ ಉಸ್ಮಾನ್‌ರವರು ಬಿಡುಗಡೆಯಾಗುವ ಕಾಲದಲ್ಲಿ ರಕ್ತದೊತ್ತಡದ ಕಾಯಿಲೆ ಮತ್ತು ಸಕ್ಕರೆ ಕಾಯಿಲೆಗೆ ಸಂಬಂಧಿಸಿದಂತೆ ಮುಂದುವರಿದ ಚಿಕಿತ್ಸೆಯನ್ನು ಪಡದುಕೊಳ್ಳುವಂತೆ ನೀವು ಸಲಹೆಯನ್ನು ನೀಡಿರುತ್ತೀರಾ ಎಂದರೆ ಹೌದು.

ಗುಡ್ಡೆ ಉಸ್ಮಾನ್‌ರವರು ನಿಮ್ಮ ಆಸ್ಪತ್ರೆಯಲ್ಲಿ ಕೊನೆಯ ಬಾರಿ ಯಾವ ದಿನಾಂಕದಂದು ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ದಿಃ 09-05-2022 ರಂದು ಪಡೆದುಕೊಂಡಿರುತ್ತಾರೆ. ಗುಡ್ಡೆ ಉಸ್ಮಾನ್‌ರವರು ಯಾವ ದಿನದಂದು ಮೃತರಾಗಿರುತ್ತಾರೆಂದು ನಿಮಗೆ ತಿಳಿದಿರುತ್ತದೆಯೇ ಎಂದರೆ ಇಲ್ಲ. ಗುಡ್ಡೆ ಉಸ್ಮಾನ್‌ರವರು ನಿಮ್ಮ ಆಸ್ಪತ್ರೆಯಲ್ಲಿ ಮೃತರಾಗಿರುತ್ತಾರೆಯೇ ಎಂದರೆ ಆ ವಿಚಾರದ ಬಗ್ಗೆ ನನಗೆ ತಿಳಿದಿಲ್ಲ.

ಗುಡ್ಡೆ ಉಸ್ಮಾನ್‌ರವರು ಯಾವ ಕಾರಣದಿಂದ ಮೃತರಾಗಿರುತ್ತಾರೆ ಎನ್ನುವ ಬಗ್ಗೆ ನಿಮ್ಮ ಬಳಿ ದಾಖಲೆಗಳು ಇರುತ್ತದೆಯೇ ಎಂದರೆ ಇರುವುದಿಲ್ಲ ಅದರ ಬಗ್ಗೆ ದಾಖಲೆಗಳು ಇರುವುದಿಲ್ಲ. ಗುಡ್ಡೆ ಉಸ್ಮಾನ್‌ರವರನ್ನು ಯಾವ ದಿನಾಂಕದಂದು ನಿಮ್ಮ ಆಸ್ಪತ್ರೆ ಯಿಂದ ಬಿಡುಗಡೆ ಮಾಡಿರುತ್ತೀರಿ ಎಂದರೆ 11-09-2021 ರಂದು ಬಿಡುಗಡೆ ಮಾಡಿರುತ್ತೇವೆ. ಗುಡ್ಡೆ ಉಸ್ಮಾನ್‌ರವರು ಸ್ವತಃ ಬಿಡುಗಡೆ ಆಗಿರುತ್ತಾರೆಯೇ ಅಥವಾ ಸಂಪೂರ್ಣ ಚಿಕಿತ್ಸೆಯನ್ನು ಪಡೆದುಕೊಂಡ ನಂತರ ಬಿಡುಗಡೆ ಮಾಡಿರುತ್ತಾರೆಯೇ ಎಂದರೆ ಸಂಪೂರ್ಣ ಚಿಕಿತ್ಸೆ ಪಡೆದ ನಂತರ ಬಿಡುಗಡೆಯಾಗಿರುತ್ತಾರೆ. ಗುಡ್ಡೆ ಉಸ್ಮಾನ್‌ರವರು ನಿಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುವಾಗ ಅವರ ವಯಸ್ಸು ಎಷ್ಟು ಆಗಿತ್ತು ಎಂದರೆ ಅವರು ನೀಡಿದ ಮಾಹಿತಿಯ ಅನುಸಾರ 64 ಆಗಿತ್ತು.

ಗುಡ್ಡೆ ಉಸ್ಮಾನ್‌ರವರ ಶವಪರೀಕ್ಷೆಯನ್ನು ನಿಮ್ಮ ಆಸ್ಪತ್ರೆ ಯಲ್ಲಿ ಮಾಡಲಾಗಿದೆಯೇ ಎಂದರೆ ಅದರ ಬಗ್ಗೆ ನನಗೆ ಅರಿವು ಇಲ್ಲ. ಗುಡ್ಡೆ ಉಸ್ಮಾನ್‌ರವರು ನಿಮ್ಮ ಆಸ್ಪತ್ರೆಯಲ್ಲಿ ಯಾವ ವಿಷಯಕ್ಕಾಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ತೀವ್ರವಾದ ತಲೆಯ ಗಾಯಕ್ಕಾಗಿ ಚಿಕಿತ್ಸೆ ಯನ್ನು ಪಡೆದುಕೊಂಡಿರುತ್ತಾರೆ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಗುಡ್ಡೆ ಉಸ್ಮಾನ್‌ರವರು ಅವರ ವಯೋ ಸಹಜ ಕಾಯಿಲೆಗಳಿಂದ, ಸಕ್ಕರೆ ಮತ್ತು ರಕ್ತದೊತ್ತಡದ ಕಾಯಿಲೆಗಳಿಂದ ಮೃತಪಟ್ಟಿರುತ್ತಾರೆ ಎಂದರೆ ಇರಬಹುದು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

**ಹೆ.ಹಿ.ಸಿ.ನ್ಯಾ ಉಡುಪಿ.**